**ದಿನಾಂಕಃ 30.05.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಎಸ್.ಕೆ.ಎಂ ವಕೀಲರಿಂದಃ**

ನಾನು ಪಿ.ಯುಸಿ ದ್ವಿತೀಯ ವರ್ಷ ವ್ಯಾಸಾಂಗ ಮಾಡಿದ್ದೇನೆ. ನಾನು Rishab Enterprise ಕಂಪನಿಯಲ್ಲಿ 2002 ರಿಂದ ಮ್ಯಾನೇಜರ್ ಆಗಿದ್ದೇನೆ. ಈ ರೀತಿ ಮ್ಯಾನೇಜರ್ ಆದ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ನೀಡಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ನನ್ನ ಪತ್ನಿಯ ಕಂಪನಿ ಇರುವುದರಿಂದ ನಾನೇ ಮ್ಯಾನೇಜರ್ ಆಗಿದ್ದೇನೆ. ಮೇಲೆ ಹೇಳಿದ ಕಂಪನಿ ನಂ.65/194, 4 ನೇ ಮುಖ್ಯ ರಸ್ತೆ, 9 ಮತ್ತು 10 ನೇ ಕ್ರಾಸ್ ಕಾವೇರಿಪುರಂ, ಕಾಮಾಕ್ಷಿಪಾಳ್ಯ, ಬೆಂಗಳೂರಿನಲ್ಲಿರುತ್ತದೆ. ಮೇಲೆ ಹೇಳಿದ ಕಂಪನಿ ಮೇಲೆ ಹೇಳಿದ ವಿಳಾಸದಲ್ಲಿ 5 ವರ್ಷದಿಂದ ಇರುತ್ತದೆ. ಮೇಲೆ ಹೇಳಿದ ಕಂಪನಿಯನ್ನು 2002 ರಿಂದ ಪ್ರಾರಂಭ ಮಾಡಿದ್ದೇವೆ. ಮೇಲೆ ಹೇಳಿದ ಕಂಪನಿಗೆ ನನ್ನ ಪತ್ನಿ ಮಾಲೀಕ. ನನ್ನ ಪತ್ನಿ ಮಾಲೀಕಳು ಎಂದು ತೋರಿಸಲು ಜಿ.ಎಸ್.ಟಿ ಸರ್ಟಿಫಿಕೇಟನ್ನು ಹಾಜರುಪಡಿಸಿದ್ದೇನೆ. ಈಗ ಕಡತವನ್ನು ನೋಡಲಾಗಿ ಜಿ.ಎಸ್.ಟಿ ಪ್ರಮಾಣ ಪತ್ರ ಕಂಡುಬರುವುದಿಲ್ಲ. ಮೇಲೆ ಹೇಳಿದ ಕಂಪನಿಗೆ ನನ್ನ ಪತ್ನಿ ಶಾಂತಿ ಕನುಂಗ ಯಾವುದೇ ರೀತಿ ಪ್ರೊಪ್ರೈಟರ್ ಅಲ್ಲ, ಆ ಕಾರಣ ಜಿ.ಎಸ್.ಟಿ ಪ್ರಮಾಣ ಪತ್ರ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

**2.** ಪ್ರಕರಣ ನಡೆಸಲು ಎಸ್.ಪಿ.ಎ ಅಧಿಕಾರ ಪತ್ರ ನೀಡಿದ್ದಾರೆ. ಸದರಿ ಅಧಿಕಾರ ಪತ್ರವನ್ನು ಮೇ 2023 ರಲ್ಲಿ ನೀಡಿರುತ್ತಾರೆ. ನಾನು ಎಸ್.ಪಿ.ಎ ಹಾಜರುಪಡಿಸಿಲ್ಲ, ಆದರೆ ಜಿ.ಪಿ.ಎ ನಿ.ಪಿ.22 ಹಾಜರುಪಡಿಸಿದ್ದೇನೆ ಎಂದರೆ ನಿಜ. ನನ್ನ ಪತ್ನಿಗೆ ಆರೋಗ್ಯ ಸರಿ ಇರದ

ಕಾರಣ ನನಗೆ ಅಧಿಕಾರ ನೀಡಿದ್ದಾರೆ. ನನ್ನ ಪತ್ನಿಗೆ 7-8 ವರ್ಷಗಳಿಂದ ಆರೋಗ್ಯ ಸಮಸ್ಯೆ ಇದೆ. ಆರೋಗ್ಯ ಸಮಸ್ಯೆಯ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನಿ.ಪಿ.22 ರಲ್ಲಿ ನಾನು ಮ್ಯಾನೇಜರ್ ಎಂದು ಹೇಳಿಲ್ಲ ಎಂದರೆ ನಿಜ. ನಿ.ಪಿ.22 ರಲ್ಲಿ ನಾನು ಮ್ಯಾನೇಜರ್ ಆಗಿ 2002 ರಿಂದ ಕೆಲಸ ಮಾಡುತ್ತಿದ್ದೇನೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನಾನು ಮೇಲೆ ಹೇಳಿದ ಕಂಪನಿಗೆ ಪ್ರೊಪ್ರೈಟರ್ ಇರುವುದಿಲ್ಲ. ಪ್ರೊಪ್ರೈಟರ್ ಸೀಲಿಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.22 ರಲ್ಲಿ ಶಾಂತಿ ಜಿ ಕಾನುಂಗ ಅಂತ ನನ್ನ ಪತ್ನಿ ಸಹಿ ಮಾಡಿರುತ್ತಾರೆ. ನನ್ನ ಪತ್ನಿಯ ಹೆಸರು ಶಾಂತಿ ಕಾನುಂಗ ಇರುತ್ತದೆ. ನಿ.ಪಿ.22 ಸೃಷ್ಟಿ ಮಾಡಿದ್ದೇನೆ ಅದರಲ್ಲಿ ನನ್ನ ಪತ್ನಿಯ ಸಹಿ ಇಲ್ಲ ಎಂದರೆ ಸರಿಯಲ್ಲ. ನಿ.ಪಿ.22 ರಲ್ಲಿ ಆರೋಪಿಯ ಕಂಪನಿಯ ವಿರುದ್ದ ಪ್ರಕರಣ ದಾಖಲಿಸುವ ಯಾವುದೇ ಅಧಿಕಾರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಎಲ್ಲಾ ಕೇಸಿಗೂ ಸಾಮಾನ್ಯ ಅಧಿಕಾರ ಪತ್ರ ಕೊಟ್ಟಿರುತ್ತಾರೆ. ನಿ.ಪಿ.22 ರಲ್ಲಿ ಆರೋಪಿ ಕಂಪನಿಯ ಹೆಸರು ನಮೂದಾಗಿಲ್ಲ ಎಂದರೆ ನಿಜ. ಆರೋಪಿ ಕಂಪನಿಯ ವಿರುದ್ದ ಪ್ರಕರಣ ದಾಖಲಿಸಲು ಮತ್ತು ಸಾಕ್ಷಿ ನುಡಿಯಲು ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಿ.ಪಿ.22 ಹೊರತುಪಡಿಸಿ ಬೇರೆ Authorization letter ಕಂಪನಿ ವತಿಯಿಂದ ನನಗೆ ಕೊಟ್ಟಿಲ್ಲ.

**3.** ಆರೋಪಿಯ ಕಂಪನಿ ಅದು ಪ್ರಾರಂಭ ಆದಾಗಿನಿಂದ ಗೊತ್ತಿದೆ. ಅದು ಯಾವಾಗ ಪ್ರಾರಂಭ ಆಗಿದೆ ಗೊತ್ತಿಲ್ಲ. ಆರೋಪಿಯ ಕಂಪನಿಗೆ ಆರೋಪಿ ರಚನಾ ಜೈನ್ ಪ್ರೊಪ್ರೈಟರ್ ಇರುತ್ತಾರೆ. ನಮ್ಮ ಹಣಕಾಸಿನ ವ್ಯವಹಾರ ರಚನಾ ಜೈನ್ ರವರ ಜೊತೆ ಇತ್ತು. ಆರೋಪಿ ರಚನಾ ಜೈನ್ ಪತಿಯ ಜೊತೆ ಯಾವುದೇ ವ್ಯವಹಾರ ಮಾಡಿಲ್ಲ. ಆರೋಪಿಯ ಪತಿ ಮತ್ತು

ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ. ಆರೋಪಿಯ ಪತಿಯ ಹೆಸರು ರಾಜ್‌ಕುಮಾರ್ ಲುನಿಯಾ ಎಂದರೆ ರಾಜ್‌ಕುಮಾರ್ ಜೈನ್ ಇರುತ್ತದೆ.

**4.** ಈಗ ತೋರಿಸುತ್ತಿರುವ ದಾಖಲೆ ಆರೋಪಿ ಕಂಪನಿಯ ಜಿ.ಎಸ್.ಟಿ ಪ್ರಮಾಣ ಪತ್ರ ಎಂದರೆ ನಿಜ. ಅದನ್ನು ಗುರುತಿಸಿದ್ದ ಅದನ್ನು **ನಿ.ಡಿ.1** ಎಂದು ಗುರುತಿಸಲಾಯಿತು. ನಿ.ಡಿ.1 ರಲ್ಲಿ legal name ರಚನಾ ಲುನಿಯಾ ಅಂತ ಇದೆ ಎಂದರೆ ನಿಜ. ರಚನಾ ಲುನಿಯಾ ಎನ್ನುವ ಹೆಸರಿಗೆ ನಾನು ಯಾವುದೇ ನೋಟೀಸು ಕಳುಹಿಸಿಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಲುನಿಯಾ ಮತ್ತು ಜೈನ್ ಒಂದೇ ಆಗಿರುತ್ತದೆ. ನನ್ನ ಪ್ರಕಾರ ಆರೋಪಿ ಕಂಪನಿಯ ಪ್ರೊಪ್ರೈಟರ್ ಹೆಸರು ರಚನಾ ಆರ್. ಜೈನ್ ಅಲಿಯಾಸ್ ರಚನಾ ಲುನಿಯಾ ಇರುತ್ತದೆ. ನಾನು ಸಲ್ಲಿಸಿದ ದೂರಿನಲ್ಲಿ ರಚನಾ ಲುನಿಯಾ ಅಂತ ಇರುವುದಿಲ್ಲ, ಆದರೆ ರಚನಾ ಆರ್.ಜೈನ್ ಅಂತ ಇರುತ್ತದೆ. ನನ್ನ ದೂರಿನಲ್ಲಿ ಆರೋಪಿಯ ಪತಿಯ ಹೆಸರು ರಾಜ್ ಕುಮಾರ್ ಜೈನ್ ಅಂತ ನಮೂದಾಗಿದೆ ಎಂದರೆ ಸರಿ. ಆರೋಪಿಯ ಪತಿಯ ಹೆಸರು ರಾಜ್ ಕುಮಾರ್ ಲುನಿಯಾ ಆ ರೀತಿ ದೂರಿನಲ್ಲಿ ನಮೂದಾಗಿಲ್ಲ ಎಂದರೆ ನಿಜ.

**5.** ನಿ.ಪಿ.5 ನೋಟೀಸು ರಚನಾ ಆರ್. ಜೈನ್‌ಗೆ ಕಳುಹಿಸಿದ್ದೇನೆ ಎಂದರೆ ನಿಜ. Kriyans Textiles Fabric ಸಂಸ್ಥೆ ಪ್ರೊಪ್ರೈಟರ್ ರಚನಾ ಲುನಿಯಾ ಎಂಬುವವರಿಗೆ ನೋಟೀಸು ಕಳುಹಿಸಿಲ್ಲ ಎಂದರೆ ನಿಜ. ನಿ.ಪಿ.5 ರಲ್ಲಿ ಪ್ರೊಪ್ರೈಟರ್ ರಚನಾ ಆರ್.ಜೈನ್ ಅಂತ ನಮೂದಾಗಿದೆ ಎಂದರೆ ನಿಜ. ನಿ.ಪಿ.5 ನೋಟೀಸಿಗೂ ಮತ್ತು ರಚನಾ ಲುನಿಯಾ ಇವರಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ರಚನಾ ಆರ್. ಜೈನ್ ಮತ್ತು ರಚನಾ ಲುನಿಯಾ ಒಬ್ಬರೇ ಅಂತ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ರಚನಾ ಲುನಿಯಾ ಮತ್ತು

Rishabh enterprises ನಡುವೆ ಯಾವುದೇ ಹಣ ಬಾಕಿ ಕೊಡುವುದು ಇಲ್ಲ ಎಂದರೆ ಸರಿಯಲ್ಲ.

**6.** ಆರೋಪಿ ಕಂಪನಿಯ ಜೊತೆ 2022 ರಲ್ಲಿ ವ್ಯವಹಾರ ಪ್ರಾರಂಭ ಮಾಡಿರುತ್ತೇವೆ. ನಮ್ಮ ಮತ್ತು ಆರೋಪಿ ಕಂಪನಿಯ ನಡುವೆ ಆಗಸ್ಟ್ 2022 ಕೊನೆಯ transaction ಇರುತ್ತದೆ. 2022 ಸಾಲಿನ ಮುಂಚೆ ಆರೋಪಿಯ ಕಂಪನಿಯ ಜೊತೆ ವ್ಯವಹಾರ ಇರಲಿಲ್ಲ, ಆದರೆ 2022ರ ನಂತರ ವ್ಯವಹಾರ ಆಗಿದೆ, ನೋಡಿಬಿಟ್ಟು ಹೇಳುತ್ತೇನೆ. ಮೊದಲನೆ ಇನ್ವಾಯ್ಸ್ ಯಾವಾಗ ತೆಗೆದೆವು ಎಂದು ನೆನಪಿಲ್ಲ. ಮೊದಲ ಇನ್ವಾಯ್ಸ್ ಮಾಡಿದಾಗ ನಾನು ಮೇಲೆ ಹೇಳಿದ ಕಂಪನಿಗೆ ಮ್ಯಾನೇಜರ್ ಆಗಿದ್ದೆ. ಆರೋಪಿಯ ಕಂಪನಿ ನನಗೆ ಆರ್ಡರ್ ಮಾಡುತ್ತಿದ್ದರು. ನಾನೇ ಕಂಪನಿ ನೋಡುತ್ತಿದ್ದರಿಂದ ನನಗೆ ಫೋನ್ ಮಾಡುತ್ತಿದ್ದರು. ನಮ್ಮ ಕಂಪನಿಯ ಪ್ರೊಪ್ರೈಟರ್ ಜೊತೆ ಆರ್ಡರ್ ಮಾಡಿಲ್ಲ ಮತ್ತು ಫೋನ್ ಮುಖಾಂತರ ವ್ಯವಹಾರ ಮಾಡಿಲ್ಲ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ನಾನೇ ನೋಡಿಕೊಳ್ಳುತ್ತಿದ್ದರಿಂದ ನನಗೆ ಪೋನ್ ಮಾಡುತ್ತಿದ್ದರು.

**7.** ಆರೋಪಿಯ ಕಂಪನಿ ಮೊದಲ ಬಾರಿಗೆ ವಸ್ತುಗಳನ್ನು ಖರೀದಿಸಿದಾಗ credit base ಮೇಲೆ 30 ದಿನ ಕೊಟ್ಟಿರುತ್ತೇನೆ. ಆರೋಪಿಯ ಕಂಪನಿ ನಮ್ಮ ಹತ್ತಿರ ಎಲ್ಲಾ ವ್ಯವಹಾರ credit base ಮೇಲೆ ಮಾಡಿರುತ್ತಾರೆ. ನಿ.ಪಿ.10 ನಮ್ಮ ಮತ್ತು ಆರೋಪಿಯ ನಡುವೆ ನಡೆದ ಮೊದಲ ವ್ಯವಹಾರದ ಇನ್ವಾಯ್ಸ್ ಎಂದರೆ ನಿಜ. ನಿ.ಪಿ.10ರ ಮುಂಚೆ ಯಾವುದಾದರೂ ವ್ಯವಹಾರ ಇತ್ತಾ ಎಂದರೆ 2-3 ತಿಂಗಳ ಮುಂಚೆ ಇತ್ತು ಎಂದು ನುಡಿಯುತ್ತಾರೆ. ನಿ.ಪಿ.10ರ ಮುಂಚೆ ಮಾಡಿದ ವ್ಯವಹಾರ ಸಹ ಪೆಂಡಿಂಗ್ ಇತ್ತು. ಎಷ್ಟು

ಇನ್ವಾಯ್ಸ್ ಗಳು ಇತ್ತು ನನಗೆ ನೆನಪಿಲ್ಲ. ಸದರಿ ಇನ್ವಾಯ್ಸ್ ಗಳು ಇದ್ದರೆ ಹಾಜರುಪಡಿಸುತ್ತೇನೆ. ಆರೋಪಿಯ ಕಂಪನಿಗೆ ಎಷ್ಟು ಮೊತ್ತಕ್ಕೆ ಮೊದಲ ಇನ್ವಾಯ್ಸ್ rise ಮಾಡಿದರು ನನಗೆ ನೆನಪಿಲ್ಲ. ಮೊದಲ ಇನ್ವಾಯ್ಸ್ ಮೊತ್ತವನ್ನು ಯಾವ ದಿನಾಂಕದಲ್ಲಿ ಕೊಟ್ಟಿದ್ದಾರೆ ನನಗೆ ನೆನಪಿಲ್ಲ. ನನಗೆ 2023 ರಿಂದ ಮಾತ್ರ ಅಧಿಕಾರ ಇದೆ, ಆ ಮುಂಚೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**8.** ಆರೋಪಿ ಕಂಪನಿಯ ಮೊದಲ ಆರ್ಡರ್ ಮಾಡಿದ ದಿನಾಂಕ ಯಾವುದು ಎಂದರೆ ನನಗೆ ನೆನಪಿಲ್ಲ, ಆದರೆ ಇನ್ವಾಯ್ಸ್ rise ಮಾಡಿದ ದಿನವೇ order place ಮಾಡಿರುತ್ತಾರೆ. ಫೋನಿನಲ್ಲಿ order place ಮಾಡಿರುವುದರಿಂದ ದಾಖಲೆ ಇರುವುದಿಲ್ಲ. ನಿ.ಪಿ.10 ರಲ್ಲಿ E-Sugum rise ಮಾಡಿದ್ದೇವೆ. ಎಷ್ಟು ಮೊತ್ತಕ್ಕೆ ಇ-ವೇ ಬಿಲ್ ಮಾಡಿದ್ದೀರಿ ಎಂದರೆ ನಿರ್ದಿಷ್ಟವಾಗಿ ಬಿಲ್ ಮಾಡಬೇಕಾಗಿಲ್ಲ ಎಂದು ನುಡಿಯುತ್ತಾರೆ. ರೂ.49 ಸಾವಿರ ಮೇಲ್ಪಟ್ಟು ಬಿಲ್ ಇದ್ದಾಗ ಇ-ವೇ ಬಿಲ್ ಕಡ್ಡಾಯವಾಗಿ ಮಾಡಬೇಕು ಎಂದರೆ 3 ಕಿಲೋಮೀಟರ್ ಒಳಗಡೆ ಇದ್ದಾಗ ಮಾಡಬೇಕಾಗಿಲ್ಲ ಎಂದು ನುಡಿಯುತ್ತಾರೆ. ರೂ. 50 ಸಾವಿರ ಬಿಲ್ ಇದ್ದಾಗ ಇ-ವೇ ಬಿಲ್ ಮಾಡುತ್ತೇವೆ. ನಿ.ಪಿ.10 ರಿಂದ 19 ಇನ್ವಾಯ್ಸ್ ಬಿಲ್ಲುಗಳಿಗೆ ಇ-ವೇ ಬಿಲ್ ಮಾಡಿದ್ದೀರಾ ಎಂದರೆ ಕೆಲವೊಂದಕ್ಕೆ ಮಾಡಿದ್ದೇವೆ ಕೆಲವೊಂದಕ್ಕೆ ಮಾಡಿಲ್ಲ ಎಂದು ನುಡಿಯುತ್ತಾರೆ. ರಾಜ್‌ಕುಮಾರ್ ಜೈನ್ ನಮ್ಮ ಹತ್ತಿರ employee ಆಗಿ ಕೆಲಸ ಮಾಡುತ್ತಿದ್ದರಿಂದ ಆತನೇ ಕೆಲವು ಇ-ವೇ ಬಿಲ್ ಮಾಡಿದ್ದಾರೆ ಕೆಲವು ಇ-ವೇ ಬಿಲ್ ಮಾಡಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ಪತಿ 4 ರಿಂದ 5 ವರ್ಷ ನಮ್ಮಲ್ಲಿ sales and marketing manager ಆಗಿ ಕೆಲಸ ಮಾಡುತ್ತಿದ್ದರು.

ಪಿಡಬ್ಲ್ಯೂ.1: ಎನ್. ಗೌತಮ್ ಕನುಂಗ.,

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಆಲಿಸಿ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).

(ಓ.ಹೇ.ಕೇ.ಸ.ಇ.)

( ಶಂಭುಲಿಂಗಯ್ಯ ಮೂಡಿಮಠ)
ಎಸಿಎಂಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.